ಮಂಡಿ ಕುಮಾರ್, ಬೆಂಗಳೂರು
ಮಡಿಕೆಯಲ್ಲಿ ಮಾಡುವ ಅನ್ನಕ್ಕೂ ಕುಕ್ಕರಲ್ಲಿ ಮಾಡುವ ಅನ್ನಕ್ಕೂ ಏನು ವ್ಯತ್ಯಾಸ?



ಅಡುಗೆಯೂ ಒಂದು ಕಲೆಯೇ. ಅದು ಗ್ರಾಮೀಣ ಕಲೆ, ಇದು ಶಿಲ್ಪಿ ಕಲೆ.

ಪಿ.ಜೆ. ರಾಘವೇಂದ್ರ, ಮೈಸೂರು
ಜೂಜಾಡುವುದನ್ನೂ ಸ್ಪೋರ್ಟ್ಸ್ ಎನ್ನುತ್ತಾರಲ್ಲಾ, ಇದು ಸರಿಯೆ?
ಮ್ಯಾಚ್ ಫಿಕ್ಸಿಂಗ್ ಕಾಲದಿಂದ ಜೂಜು, ಆಟ, ಕ್ರೀಡೆ ಎಲ್ಲವೂ ಒಂದೇ.

ವಿಜಯಕುಮಾರ್ ಎಚ್.ಕೆ. ರಾಯಚೂರು
ನಾವು ಭ್ರಷ್ಟಾಚಾರವನ್ನು ನುಂಗಿದ್ದೇವೋ ಅಥವಾ ಭ್ರಷ್ಟಾಚಾರ ನಮ್ಮನ್ನು ನುಂಗಿದೆಯೋ?
ನಾವು ಸ್ವಾರ್ಥವೆಂಬ ಶಾಲನ್ನು ಧರಿಸಿದ್ದೇವೆ. ಭ್ರಷ್ಟಾಚಾರ ಆ ಶಾಲಿನ ಒಂದು ಎಳೆ.

ಆನಂದತೀರ್ಥ, ಮೈಸೂರು
ಗಂಡ ವಾದ, ತರ್ಕಗಳಲ್ಲಿ ಪಂಡಿತ. ಸತಿ ಮಾತನಾಡಲಾರಂಭಿಸಿದರೆ ಯಾರು ತೆಪ್ಪಗಾಗುತ್ತಾರೆ?



ಪಂಡಿತನಿಗೆ ಡುಂಡಿರಾಜರ 'ನದಿ ದಾಟಲು ತೆಪ್ಪ ಬೇಕು; ಸಂಸಾರಸಾಗರ ದಾಟಲು ತೆಪ್ಪಗಿರಬೇಕು' ತಿಳಿದಿರುತ್ತದೆ.

ಪುರುಷೋತ್ತಮ ರೆಡ್ಡಿ, ಪಾವಗಡ
ಸ್ವಜಾತಿ ವೇದಿಕೆಯ ಸ್ವಾಮಿಗಳು ಮನುಜರೆಲ್ಲ ಒಂದೇ ಎಂದಿದ್ದಾರೆ. ಜಾತಿಯನ್ನು ಅವರು ಬಿಡ್ತಾರಾ, ನಾನು ಬಿಡಬೇಕಾ?
ಜಾತಿಯನ್ನು ಬಿಟ್ಟರೆ ಪೀಠವನ್ನು ಬಿಡಬೇಕಲ್ಲ! ನೀವೇ ಬಿಟ್ಟು ಅವರಿಗಿಂತ ಶ್ರೇಷ್ಠರಾಗಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಆತ್ಮಕ್ಕೆ ವೈರಿಗಳು ಇದ್ದಾರೆಯೆ?
ದುರಾತ್ಮರು.

ವಿ. ಹೇಮಂತಕುಮಾರ್, ಬೆಂಗಳೂರು
ಸ್ಕೂಲಲ್ಲಿ ಓದುತ್ತಿದ್ದಾಗ ಬರುತ್ತಿದ್ದ ಭಾನುವಾರಕ್ಕೂ ನೌಕರಿಯಲ್ಲಿರುವಾಗಿನ ಭಾನುವಾರಕ್ಕೂ ವ್ಯತ್ಯಾಸ?
ಆಗಿನದು ಮನ ಕ್ಲೀನಿಂಗ್ (ರಿಲ್ಯಾಕ್ಸಿಂಗ್); ಈಗಿನದು ಮನೆ ಕ್ಲೀನಿಂಗ್.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಹೆಣಕ್ಕೆ ಹೊಸ ಬಟ್ಟೆ ಉಡಿಸುತ್ತಾರೆ. ಆದರೆ ಬದುಕಿರುವವರಿಗೆ ಹಳೆಯ ಬಟ್ಟೆ. ಏಕೆ ಹೀಗೆ?
ಹಳೆಯ ಬಟ್ಟೆ ಉಡಿಸಿದರೆ ಹೆಣ ಭೂತವಾಗಿ ಕಾಡೀತೆಂಬ ಭಯ.

ಭಾರತಿ ಗಂಗಾಧರ್, ಬೆಂಗಳೂರು
ಸಮಾರಂಭಗಳಲ್ಲಿ ಬಂದವರನ್ನು ವಿಚಾರಿಸದೆ ಬರದಿದ್ದವರನ್ನು ಏಕೆ ಬರಲಿಲ್ಲವೆಂದು ಕೇಳುವರಲ್ಲ, ಇದು ಸರಿಯೆ?
ಸರಿಯೇ. ಅಗೋಚರ ಎಂದಿಗೂ ಕುತೂಹಲ, ಆಸಕ್ತಿಗಳ ಆಗರ.

ಪದ್ಮನಾಭ, ಮೈಸೂರು
ನಾವು ಅನ್ಯರಿಗೆ ಕೇಡು ಬಯಸಿದರೆ ನಮಗೇ ಕೇಡಂತೆ. ಅನ್ಯರ ಸಾವು ಬಯಸಿದರೆ ನಾನು ಸಾಯುವೆನೆ?
ಸಾವು ಬಯಸಿದಾಕ್ಷಣ ಮನುಷ್ಯತ್ವ ಸತ್ತಿತಲ್ಲ. ಮನುಷ್ಯತ್ವ ಸತ್ತವನು ಜೀವಚ್ಛವವೇ.

ಜಗದೀಶ ಬಿ. ಹೊಸೂರು, ಮೈಸೂರು
ಕಲ್ಲಿನ ಮೂರ್ತಿಯನ್ನು ದೇವರೆಂದೇ ನಂಬಿರುವವರು ಚಿನ್ನದ ಮುಖವಾಡ ಹಾಕಿ ಪೂಜಿಸುವುದೇಕೆ?
ಇವರೂ ಹೊರಗೆ ಚಿನ್ನ, ಒಳಗೆ ಕಲ್ಲು ಆಗಿರುತ್ತಾರಲ್ಲ. ದೇವ ಭಕ್ತನ ಬಿಂಬ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ವ್ಯಕ್ತಿಯ ಆಗುಹೋಗುಗಳು ಅವನ ಪೂರ್ವಜನ್ಮದ ಕರ್ಮಗಳ ಫಲವಂತೆ. ನಿಜವೆ?
ಪುನರ್ಜನ್ಮ ನಿರಾಧಾರ. ನಮ್ಮೆಲ್ಲ ನಿನ್ನೆಗಳ ಒಟ್ಟು ಮೊತ್ತವೇ ನಮ್ಮ ಇಂದು.

ಮಲ್ಲಿಕಾರ್ಜುನ, ಸುರಧೇನುಪುರ
ಕಿವಿಮಾತು ಕಿವಿಗೆ. ಕವಿಮಾತು...?
ಬದುಕಿನ ಸವಿಗೆ.

## ವಾರದ ಪ್ರಶ್ನೆ

ವಿಜಯಾ ರಾವ್, ಬೆಂಗಳೂರು
ಬರೀ ಹೆಣ್ಣುಮಕ್ಕಳೇ ಕರಾಟೆ ಕಲಿಯಬೇಕೆಂದು ನಿಯಮ ಮಾಡಿದರೆ?
ಗಂಡುಮಕ್ಕಳು ಬೋನ್ ಸೆಟ್ಟಿಂಗ್ ಸೇವೆಯಲ್ಲಿ ತೊಡಗುತ್ತಾರೆ.

ಯೆಚ್. ಲಕ್ಷ್ಮೀನಾರಾಯಣ, ಉಜಿರೆ
ಇತ್ತೀಚೆಗೆ ಕೆಲವರು ಎಲ್ಲೆಂದರಲ್ಲಿ 'ಇದು ಬಂದ್ಬಿಟ್ಟು' ಎಂದು ಬಳಸುವರಲ್ಲ, ಇದರ ಅರ್ಥ?
ಇವರ ತಲೆಯಲ್ಲಿ ಆಲೋಚನೆ ಬಂದ್ ಆದ್ದರಿಂದ ಬಿಟ್ಟು ಬಿಟ್ಟು ಮಾತನಾಡುತ್ತಾರೆ ಎಂದು.

ಬೂಕನಕೆರೆ ವಿಜೇಂದ್ರ, ಮೈಸೂರು
ಪರಧನ, ಪರಸ್ತ್ರೀ ಬೇಡ ಎನ್ನುವ ಯುವಕ–ಯುವತಿಯರಿಗೇಕೆ ಪರದೇಶದ ಮೇಲೆ ವ್ಯಾಮೋಹ?
'ಉದಾರಚರಿತಾನಾಂತು ವಸುಧೈವ ಕುಟುಂಬಕಂ'. ಆದ್ದರಿಂದ ಪರದೇಶವೆಂಬ ಕಲ್ಪನೆಯೇ ತಪ್ಪಂತೆ.

ರತ್ನಜ, ಮೈಸೂರು
ಮದುವೆಯಾಗಿ ದಶಕಗಳೇ ಕಳೆದರೂ ಪತ್ನಿ ಇನ್ನೂ ಪ್ರಶ್ನಾರ್ಥಕವಾಗಿಯೇ ಇರುವಳಲ್ಲಾ?



ಗುಡ್. ಅರ್ಥವಾಗಿದ್ದು ಆಸಕ್ತಿ ಕಳೆದುಕೊಳ್ಳುತ್ತದೆ.

ಪಿ. ಜಯವಂತ ಪೈ, ಕುಂದಾಪುರ
ಸದನದ ಬಾವಿಗೂ ನೀರಿರುವ ಬಾವಿಗೂ ವ್ಯತ್ಯಾಸವೇನು?
ನೀರಿರುವ ಬಾವಿಯಲ್ಲಿ ಕೊಳಕರನ್ನು ಇಳಿಯಲು ಬಿಡುವುದಿಲ್ಲ.

ಅನಸೂಯ ಟಿ, ಕೇದಿಗೆಮನೆ
'ಭ್ರಷ್ಟಾಚಾರಮುಕ್ತ ದೇಶ'. ಇದು ಕನಸೋ ನನಸೋ?
ನನಸೇ. ಭ್ರಷ್ಟಾಚಾರ ಮುಕ್ತವಾಗಿ ಇದೆಯಲ್ಲ!

■ ರಾಮ್